ನಿವೇದನೆ

# ಹೂವಿನ ಬೆಳೆಗಾರರ ಪೀಕಲಾಟವೂ ಪುಸ್ತಕ ಪ್ರೀತಿಯೂ

ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಹಾರ–ತುರಾಯಿ ನೀಡುವುದು ಹಾವಳಿಯೆನಿಸುವ ಮಟ್ಟಕ್ಕೆ ಹೋಗಿದ್ದರೆ, ಅದಕ್ಕೆ ಕಾರಣ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಅನ್ನಿಸಿಕೊಂಡ ರಾಜಕಾರಣಿಗಳು.

ರಾಜ್ಯ ಸರ್ಕಾರ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಆಯೋಜಿಸುವ ಸಭೆ, ಸಮಾರಂಭಗಳಲ್ಲಿ ಹೂಗುಚ್ಛ, ಹಾರ–ತುರಾಯಿ, ಹಣ್ಣು, ನೆನಪಿನ ಕಾಣಿಕೆ ನೀಡುವುದನ್ನು ನಿಷೇಧಿಸಲಾಗಿದೆ. ಇವುಗಳ ಬದಲು ಪುಸ್ತಕಗಳನ್ನು ನೀಡಬಹುದು ಎಂದು ಸರ್ಕಾರ ಸೂಚಿಸಿದೆ. ಓದುವ ಅಭಿರುಚಿ ಬೆಳೆಸುವ, ಪುಸ್ತಕ ಸಂಸ್ಕೃತಿ ಪೊರೆಯುವ ಸದಾಶಯವುಳ್ಳ ಪ್ರಯತ್ನಗಳ ಬಗೆಗೆ ಯಾರದೂ ಆಕ್ಷೇಪ ಇರಲಾರದು. ಆದರೆ, ಅದಕ್ಕಾಗಿ ಹೂಗುಚ್ಛ, ಹಣ್ಣಿನ ಬುಟ್ಟಿ, ಹಾರ–ತುರಾಯಿ ನೀಡುವುದನ್ನು ಸಾರಾಸಗಟಾಗಿ ನಿಷೇಧಿಸಬೇಕಾದ ಅಗತ್ಯವಿದ್ದಂತೆ ತೋರುತ್ತಿಲ್ಲ.

ಪುಸ್ತಕ ಎಂಬುದು ಅರಿವಿನ ಆಕರ. ಎಂದೋ ಕಟ್ಟಿದ ಪದ್ಯ, ಯಾರೋ ರಚಿಸಿದ ಕತೆ, ಮತ್ತೆಂದೋ ರೂಪುಗೊಂಡ ವಚನ ನಮ್ಮ ಪ್ರಜ್ಞೆಯ ಭಾಗವಾಗಿ ಉಳಿಯುತ್ತವೆ. ಕಾಲವನ್ನು ಮೀರಿ ನಿಲ್ಲುತ್ತವೆ. ಅರ್ಥಪೂರ್ಣ ಬರಹ, ಸಾಹಿತ್ಯ ನಾಡಿನ ಆತ್ಮವಿದ್ದಂತೆ. ಹಾಗಂತ ಒತ್ತಾಯ ಮಾಡಿ ಯಾರಿಂದಲೂ ಏನನ್ನೂ ಓದಿಸಲಾಗದು. ಓದು ಒಲಿಯುವುದು ಪ್ರೀತಿಯಿಂದ. ಸರ್ಕಾರವೋ ಮಂತ್ರಿಗಳೋ ಹುಕುಂ ಜಾರಿಗೊಳಿಸಿದ ಮಾತ್ರಕ್ಕೆ ಪುಸ್ತಕಗಳ ಬಗೆಗೆ ಜನಸಾಮಾನ್ಯರಲ್ಲಿ ಪ್ರೀತಿ ಉಕ್ಕುವುದಿಲ್ಲ. ಮನವೊಲಿಕೆ ಮೂಲಕ, ತಿಳಿಹೇಳುವ ಮೂಲಕ ನೆರವೇರಿಸಬೇಕಾದ ಕೆಲಸಕ್ಕೆ ನಿಷೇಧದ ಅಸ್ತ್ರ ಬಳಸುವುದರಿಂದ ಹೆಚ್ಚಿನ ಪ್ರಯೋಜನ ದೊರೆಯಲಾರದು.

ಫಲ–ಪುಷ್ಪ, ನೆನಪಿನ ಕಾಣಿಕೆ ನೀಡುವುದು ನಮ್ಮಲ್ಲಿ ಒಂದು ಸಂಪ್ರದಾಯವಾಗಿದೆ. ಗೌರವ ಸೂಚಕ ಸ್ಥಾನ ಪಡೆದಿದೆ. ಹಾಗಂತ ಅದಕ್ಕಾಗಿ ದುಂದುವೆಚ್ಚ ಮಾಡುವುದನ್ನೂ ಸರ್ಕಾರಿ ಸಮಾರಂಭಗಳ ಅಮೂಲ್ಯ ಸಮಯವು ಗಣ್ಯಮಾನ್ಯರಿಗೆ ಹಾರ–ತುರಾಯಿ ನೀಡುವುದಕ್ಕಾಗಿಯೇ ಪೋಲಾಗುವುದನ್ನೂ ಸಮರ್ಥಿಸಲಾಗದು. ಆದರೆ, ನಿಷೇಧಕ್ಕೆ ಒಳಗಾಗುವಂಥ ಹಾನಿಕಾರಕ ಅಂಶಗಳನ್ನು ಹೂವು–ಹಣ್ಣುಗಳು ಹೊಂದಿಲ್ಲ ಎಂಬುದನ್ನು ಯಾರು ಬೇಕಾದರೂ ಸಾರಿ ಹೇಳಬಹುದು. ಹೂವು–ಹಣ್ಣು ಬೆಳೆಯುವುದು, ಅವುಗಳನ್ನು ಮಾರಾಟ ಮಾಡುವುದು ಮತ್ತು ಬಳಸುವುದು ಅಕ್ರಮವಲ್ಲ. ಹಾಗೆಯೇ ಆರೋಗ್ಯದ ನೆಲೆಯಲ್ಲಿ ನಿಷೇಧಕ್ಕೆ ಒಳಗಾಗುವಂತಹ ಅಮಲು ಪದಾರ್ಥಗಳು ಕೂಡ ಅಲ್ಲ.

ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಹಾರ–ತುರಾಯಿ ನೀಡುವುದು ಹಾವಳಿಯೆನಿಸುವ ಮಟ್ಟಕ್ಕೆ ಹೋಗಿದ್ದರೆ, ಅದಕ್ಕೆ ಕಾರಣ ಅಧಿಕಾರಶಾಹಿ ಮತ್ತು ಜನಪ್ರತಿನಿಧಿಗಳು ಅನ್ನಿಸಿಕೊಂಡ ರಾಜಕಾರಣಿಗಳು. ಅಧಿಕಾರಸ್ಥರ ಒಂದು ಸಣ್ಣ ನೈತಿಕ ನಡಾವಳಿಯಿಂದ ನಿವಾರಿಸಬಹುದಾದ ಹಾವಳಿ ಇದು. ಇಂತಹವುಗಳಿಗೆ ಉತ್ತೇಜನ ದೊರೆಯುವುದಿಲ್ಲ ಎಂಬ ಸಂದೇಶ ರವಾನೆಯಾದರೆ ಸಾಕು, ಅದು ತಾನಾಗಿಯೇ ನಿಯಂತ್ರಣಕ್ಕೆ ಒಳಪಡುತ್ತದೆ. ಸರಳ, ಸಜ್ಜನಿಕೆಯ ನಡೆಗಳು ಮಾತ್ರ ಸಾರ್ವಜನಿಕ ಬದುಕನ್ನು ನೇರ್ಪುಗೊಳಿಸಬಲ್ಲವು. ನಾಯಕರನ್ನಿಸಿಕೊಂಡವರನ್ನು ಜೀವಂತವಾಗಿ ಇಡಬಲ್ಲವು.

ಹೂವು, ಹಣ್ಣಿನ ಬೇಸಾಯ ಮತ್ತು ಮಾರುಕಟ್ಟೆ ಜಾಲವು ಈಗ ಉದ್ಯಮದ ಸ್ವರೂಪ ಪಡೆದಿವೆ. ಈ ಕ್ಷೇತ್ರದಲ್ಲಿ ಅಪಾರ ಸಂಖ್ಯೆಯಲ್ಲಿ ತೊಡಗಿಸಿಕೊಂಡಿರುವ ಬೆಳೆಗಾರರು ಮತ್ತು ವ್ಯಾಪಾರಸ್ಥರ ಹಿತರಕ್ಷಣೆ ಕೂಡ ಸರ್ಕಾರಕ್ಕೆ ಮುಖ್ಯವಾದುದು. ಸರ್ಕಾರದ ಆದೇಶದ ವಿರುದ್ಧ ಈ ವರ್ಗ ಈಗಾಗಲೇ ತಮ್ಮ ಅಸಮಾಧಾನ ಹೊರಹಾಕಿದೆ. ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಅದರಿಂದ ಆಗಬಹುದಾದ ಸಾಧಕ–ಬಾಧಕಗಳ ಬಗೆಗೆ ಕೂಲಂಕಷವಾಗಿ ಯೋಚಿಸಬೇಕಾದುದು ಸರ್ಕಾರದ ಜವಾಬ್ದಾರಿ. ಈ ವಿಚಾರದಲ್ಲಿ ಅದು ಆದಂತಿಲ್ಲ ಎಂಬುದು ಮೇಲ್ನೋಟಕ್ಕೇ ಮನವರಿಕೆಯಾಗುತ್ತದೆ.

ಪುಸ್ತಕ ಪ್ರೀತಿ, ಓದುವ ಅಭಿರುಚಿ ಬಗ್ಗೆ ಮಾತನಾಡುತ್ತಿರುವ ನಮ್ಮ ಅಧಿಕಾರಸ್ಥರ ಕಾಳಜಿ ಪ್ರಮಾಣಿಕವಾದದ್ದೇ ಆದರೆ ಮೊದಲು ಅವರು ಸಾರ್ವಜನಿಕ ಗ್ರಂಥಾಲಯಗಳನ್ನು ಪುನಶ್ಚೇತನಗೊಳಿಸುವ ಕಡೆಗೆ ತಮ್ಮ ಗಮನ ಕೇಂದ್ರೀಕರಿಸಬೇಕು. ಸಾರ್ವಜನಿಕ ಗ್ರಂಥಾಲಯಗಳನ್ನು ಜನಸಾಮಾನ್ಯರ ವಿಶ್ವವಿದ್ಯಾಲಯಗಳೆಂದು ಪರಿಗಣಿಸಲಾಗಿದೆ. ಈ ಗ್ರಂಥಾಲಯಗಳಿಂದ ಓದುಗ ಸಮೂಹ ವಿಮುಖವಾಗುತ್ತಿದೆ ಎಂಬ ಆತಂಕ ವ್ಯಕ್ತವಾಗಲು ಆರಂಭಿಸಿ ವರ್ಷಗಳೇ ಉರುಳಿವೆ. ಗ್ರಂಥಾಲಯಗಳು ಸೊರಗುತ್ತಿವೆ. ಅವುಗಳನ್ನು ಸಶಕ್ತಗೊಳಿಸುವ ಪ್ರಯತ್ನಗಳೇ ಕಾಣದಿರುವುದು ದುರದೃಷ್ಟಕರ. ಗ್ರಂಥಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ಕರ ಸಂಗ್ರಹಿಸಲಾಗುತ್ತಿದೆ. ಆದರೆ, ಆ ಮೂಲಕ ಸಂಗ್ರಹವಾಗುತ್ತಿರುವ ಹಣ ಸದ್ಬಳಕೆ ಆಗುತ್ತಿಲ್ಲ ಎಂಬ ಆರೋಪಗಳು ವ್ಯಾಪಕವಾಗಿವೆ. ಸ್ಥಳೀಯ ಸಂಸ್ಥೆಗಳ ಆಸ್ಥೆಯ ಕೊರತೆ ಇದಕ್ಕೆ ಕಾರಣ.

ಗ್ರಂಥಾಲಯಗಳಲ್ಲಿ ಓದಲು ಲಭ್ಯವಿರುವ ಪುಸ್ತಕಗಳ ಬಗೆಗೂ ದೂರುಗಳಿವೆ. ವಿವಿಧ ವಯೋಮಾನದ ಎಲ್ಲ ಜ್ಞಾನಶಿಸ್ತುಗಳ ಓದುಗರ ಅಭಿರುಚಿ, ಆಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡು ಎಲ್ಲ ಬಗೆಯ ಉತ್ತಮ ಕೃತಿಗಳು ಲಭ್ಯವಾಗುವಂತೆ ನೋಡಿಕೊಂಡರೆ ಗ್ರಂಥಾಲಯಗಳು ಪುನಃ ಜೀವಕಳೆ ಪಡೆಯಲಿವೆ. ಪುಸ್ತಕ ಪ್ರೀತಿ ಬೆಳೆಸಲು ಅರ್ಥಪೂರ್ಣ ಮಾರ್ಗೋಪಾಯಗಳಿಗೆ ಕೊರತೆ ಇಲ್ಲ. ಕೊರತೆ ಇರುವುದು ಬದ್ಧತೆಯಲ್ಲಿ. ಅನುದಾನ ಹಂಚಿಕೆಯ ವಿಚಾರದಲ್ಲಿ.

■ ಎನ್‌. ಉದಯಕುಮಾರ್

